# ಶಿಕ್ಷಣ ಚಿಂತನ

ಪ್ರಶಾಂತ ಎಸ್. ಭಟ್

## ಶಿಸ್ತು ಮತ್ತು ಶಿಕ್ಷೆ

**ಪ್ರಾ**ಥಮಿಕ ಶಿಕ್ಷಣ ಮನುಷ್ಯರ ಜೀವನದ ಪ್ರಮುಖ ಘಟ್ಟ. ಹಸಿ ಹಸಿ ಮಣ್ಣಿನ ಮುದ್ದೆಯನ್ನು ನೀರಿನಲ್ಲಿ ನೆನೆಹಾಕಿ, ಚೆನ್ನಾಗಿ ಕಲಸಿ, ಹದಮಾಡಿ, ಮಣ್ಣಿನ ಗೊಂಬೆಯಾಗಿ ರೂಪಿಸುವ ಹೊಣೆ ಕುಂಬಾರನದು. ಅದೇ ರೀತಿ ತೊಟ್ಟಿಲಿನಲ್ಲಿ ಆಡುವ ಮಗುವಿಗೆ ಅಂಬೆಗಾಲಿಡಲು ಪ್ರೋತ್ಸಾಹಿಸಿ, ನಡೆಯಲು, ಮಾತನಾಡಲು ಕಲಿಸುವ ಹೊಣೆ ತಂದೆ–ತಾಯಿಯರದು. ಇದನ್ನು ಕರ್ತವ್ಯವೆನ್ನ ಬಹುದಲ್ಲವೇ? ಆದರೆ ಮನೆಯ ವಾತಾವರಣ ಎಷ್ಟರ ಮಟ್ಟಿಗೆ ಮಗುವನ್ನು ಮುಂದಿನ ಉತ್ತಮ ಪ್ರಜೆಯನ್ನಾಗಿ ಬೆಳೆಸಬಲ್ಲುದು? ಅದಕ್ಕಾಗಿಯೇ ಪ್ರಾಥಮಿಕ ಶಿಕ್ಷಣ ಮಗುವಿನ ಭವಿಷ್ಯವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಮನೆಯ ಪರಿಸರದಲ್ಲಿ ಚೆಲ್ಲುಚೆಲ್ಲಾಗಿ, ಮುದ್ದುಮುದ್ದಾಗಿ ಬೆಳೆಯುತ್ತಿರುವ ಮಗುವಿನ ಭವಿಷ್ಯ ಕೇವಲ ಮನೆಯ ವಾತಾವರಣವೊಂದರಲ್ಲಿಯೇ ರೂಪುಗೊಳ್ಳಲು ಸಾಧ್ಯವಿಲ್ಲ. ಶಿಸ್ತುಬದ್ಧವಾಗಿ ಪರಿಪೂರ್ಣವಾಗಿ ಬೆಳೆಯಲು ಪ್ರಾಥಮಿಕ ಶಿಕ್ಷಣ ಅತಿ ಅವಶ್ಯವೇ ಸರಿ.

'ಶಿಸ್ತು' ಮತ್ತು 'ಶಿಕ್ಷೆ' ಇವೆರಡನ್ನೂ ಸಾಮಾನ್ಯವಾಗಿ ನಿಷ್ಠುರ ಹಾಗೂ ಕ್ರೂರ ಪದಗಳನ್ನಾಗಿ ಉಪಯೋಗಿಸಲಾಗುತ್ತಿದೆ. ಆದರೆ ಇವೆರಡೂ ಪದಗಳು ಬೇರೆ ಬೇರೆ ಅರ್ಥಗಳನ್ನು ಕೊಡುತ್ತವೆ. ಮಗುವು ನಿಯಮವನ್ನು ಮುರಿದಾಗ, ದಾರಿ ತಪ್ಪಿದಾಗ, ಇನ್ನೊಬ್ಬರಿಗೆ ತೊಂದರೆ ಉಂಟುಮಾಡಿದಾಗ ಶಿಕ್ಷೆಗೆ ಗುರಿಯಾಗುತ್ತದೆ. ಆದರೆ ಶಿಸ್ತು ಆ ಮಗುವಿನಲ್ಲಿರುವ ಸುಪ್ತ ಪ್ರತಿಭೆಗೆ ಒತ್ತುಕೊಟ್ಟು ಅಂತರಾಳದ ದುರ್ಬಲತೆಯನ್ನು ಹೋಗಲಾಡಿಸಿ ಮುಂದಿನ ಭವಿಷ್ಯವನ್ನು ಉಜ್ವಲಗೊಳಿಸುತ್ತದೆ. ಶಿಸ್ತಿನ ಜೀವನ ಮಗುವಿಗೆ ಬದುಕಿನ ಪಾಠವನ್ನು ಕಲಿಸುತ್ತದೆ, ಪರಿಣತಿಯನ್ನು ನೀಡುತ್ತದೆ. ಶಿಸ್ತುಬದ್ಧವಲ್ಲದ ವಾತಾವರಣದಲ್ಲಿ ಮಗು ಏನನ್ನೂ ಸರಿಯಾಗಿ ಕಲಿಯಲಾರದು. ಆದರ್ಶ ಜೀವನಕ್ಕೆ ಹಾಗೂ ಆಧ್ಯಾತ್ಮಿಕ ಬೆಳವಣಿಗೆಗೆ ವರುಷಗಳೇ ಬೇಕಾದೀತು. ಈ ದಿಸೆಯಲ್ಲಿ ಕೌಟುಂಬಿಕ ಜವಾಬ್ದಾರಿ ಎಷ್ಟು ಮುಖ್ಯವೋ ಅಷ್ಟೇ ಜವಾಬ್ದಾರಿಯಿಂದ ಶಾಲಾಪರಿಸರವನ್ನೂ ನಿರ್ಮಿಸಬೇಕಾಗುತ್ತದೆ. ಗೌರವಪೂರ್ಣ ನಡವಳಿಕೆ, ಸಾಮಾಜಿಕ ಜವಾಬ್ದಾರಿ, ಶಿಸ್ತು ಬದ್ಧ ಜೀವನಗಳನ್ನು ಈ ಪ್ರಾಥಮಿಕ ಹಂತದಲ್ಲಿಯೇ ಕಲಿಸ ಬೇಕಾಗುತ್ತದೆ. ಆದ್ದರಿಂದಲೇ ಶಿಸ್ತನ್ನು ರಚನಾತ್ಮಕವಾಗಿ ಬಳಸಬೇಕು. ಕೆಲವು ಶಾಲೆಗಳಲ್ಲಿ, ಸದ್ದಾಗದಂತೆ ನಡೆಯಬೇಕು, ಸರತಿಯ ಸಾಲಿನಲ್ಲಿ ಸಾಗಬೇಕು, ಕಸಕಡ್ಡಿಗಳನ್ನು ಕಂಡಕಂಡಲ್ಲಿ ಎಸೆಯಬಾರದೆಂಬ ನಿಯಮಗಳನ್ನು ಮಾಡಲಾಗಿದೆ. ಇದು ಒಂದು ಆರೋಗ್ಯಕರ ಬೆಳವಣಿಗೆಯನ್ನು ಸೂಚಿಸುತ್ತದೆ. ಮಗು ಮುಂದೆ ಬೆಳೆದು ಪ್ರಬುದ್ಧ ನಾಗರಿಕನಾದಾಗ ಬಸ್ಸಿನಲ್ಲಿ ಏರುವಾಗ, ಬ್ಯಾಂಕಿನಲ್ಲಿ ಹಣ ಪಡೆಯುವಾಗ, ಟಿಕೆಟ್ ಕೌಂಟರಿನಲ್ಲಿ ನಿಲ್ಲುವಾಗ ಮುಜುಗರವಿಲ್ಲದೇ ನಿಯಮ ಪಾಲಿಸಲು ಕಟಿಬದ್ಧನಾಗುತ್ತಾನೆ, ತಾಳ್ಮೆಯಿಂದ ಕಾಯುತ್ತಾನೆ. ಅದೇ ರೀತಿ ಶಾಲೆಗಳಲ್ಲಿ ಮಕ್ಕಳಿಗೆ ಕೆಲವು ಕಾಲ ಸುಮ್ಮನೆ ಮಾತನಾಡದೆ, ಅತ್ತಿತ್ತ ನೋಡದೇ ಕುಳಿತುಕೊಳ್ಳಲು ಸೂಚಿಸಲಾಗುತ್ತದೆ. ಇದು ಕೂಡ ಮಗುವಿನಲ್ಲಿ ತಾಳ್ಮೆಯನ್ನು ತುಂಬುತ್ತದೆ. ಆಂಗ್ಲ ಭಾಷೆಯಲ್ಲಿ ಒಂದು ಮಾತಿದೆ: **"ಪಳಗಿಸಿದ ಹೊರತು ಕುದುರೆ ಭಾರ ಎಳೆಯಲಾರದು; ಬಲಪ್ರಯೋಗವಿಲ್ಲದೇ ಗಾಳಿ ಏನನ್ನೂ ಎಳೆದೊಯ್ಯದು."** ಆರಂಭಿಕ ಅವಧಿಯಲ್ಲಿ ಶಿಸ್ತಿನ ಜೀವನಕ್ಕೆ ಒಳಪಡಿಸದಿದ್ದರೆ ಮಗುವು ಮುಂದೆ ಮಾನಸಿಕವಾಗಿ ಬೆಳೆದು ದೊಡ್ಡವನಾಗಲಾರ. ಈ ರೀತಿ ಬಾಲ್ಯದಲ್ಲಿ ಪಳಗಿದ ಮಗು ಪ್ರೌಢನಾದಾಗ ಸಾಮಾಜಿಕ ಪರಿಸರದಲ್ಲಿ, ಸಭೆ ಸಮಾರಂಭಗಳಲ್ಲಿ ಶಿಸ್ತುಬದ್ಧವಾಗಿ ಯಾರಿಗೂ ತೊಂದರೆಯಾಗದ ರೀತಿಯಲ್ಲಿ ನಡೆದುಕೊಳ್ಳುತ್ತಾನೆ.

ಇನ್ನು ಶಿಕ್ಷೆಯ ಪಾತ್ರವೇನು? ಮಗು ಶಾಲೆಯ ನಿಯಮವನ್ನು ಮುರಿದಾಗ ನೀಡುವ ಶಿಕ್ಷೆ ಮುಂದೆ ಅದೇ ತಪ್ಪನ್ನು ಮತ್ತೆ ಮತ್ತೆ ಮಾಡದಂತೆ ತಡೆಯುತ್ತದೆ. ಶಿಕ್ಷೆ ಕೂಡ ಮಗುವಿನ ನೈತಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಶಾಲೆಯಲ್ಲಿ ನೀಡುವ ಸಾಮಾನ್ಯ ಶಿಕ್ಷೆ ಎಂದರೆ ಮಗುವನ್ನು ತರಗತಿಯಿಂದ ಹೊರಗೆ ಕಳಿಸುವುದು. ಇದು ಸರಿಯಲ್ಲ. ಈ ರೀತಿಯ ಶಿಕ್ಷೆಯು ಮಗುವಿನ ಅಮೂಲ್ಯವಾದ ಸಮಯವನ್ನು, ಮಾನಸಿಕ ಬೆಳವಣಿಗೆಯನ್ನು ಹಾಳುಮಾಡುತ್ತದೆ. ಪುಸ್ತಕವನ್ನು ತರಲು ಮರೆಯುವುದು, ಮನೆ ಪಾಠವನ್ನು ಮಾಡದಿರುವುದು, ಪೆನ್ನನ್ನೋ ಪೆನ್ಸಿಲನ್ನೋ ಮರೆತು ಬರುವುದು – ಇವಕ್ಕೆಲ್ಲ ಮಗುವನ್ನು ತರಗತಿಯಿಂದ ಹೊರಗೆ ಕಳಿಸುವುದು ಎಷ್ಟು ಸಮಂಜಸ? ಕೆಲವು ಹುಡುಗರಂತೂ ತರಗತಿಯ ಒತ್ತಡದಿಂದ ದೂರವಿರಲು ಇದನ್ನೇ ಅಭ್ಯಾಸವನ್ನಾಗಿ ಮಾಡಿಕೊಳ್ಳುತ್ತಾರೆ. ಇದಕ್ಕೆ ಬದಲಾಗಿ ಆ ಸಮಯದಲ್ಲಿ ಮಗ್ಗಿ ಬರೆಯಲೋ, ಪಾಠವನ್ನು ಬರೆಯಲೋ ಅಥವಾ ಕಂಠಪಾಠ ಮಾಡಲೋ ಕೊಟ್ಟರೆ ಮಗುವು ತನ್ನ ತಪ್ಪನ್ನು ತಿದ್ದಿಕೊಳ್ಳುವುದರ ಜೊತೆಗೆ ಹೆಚ್ಚಿನ ಜ್ಞಾನವನ್ನು ಹೊಂದುವುದಿಲ್ಲವೇ? ಈ ಪ್ರಸಂಗದಲ್ಲಿ ಹೆಚ್ಚಿನ ಮಾನಸಿಕ ಒತ್ತಡಕ್ಕೆ ಒಳಗಾದ ಮಗು ತನ್ನ ತಪ್ಪನ್ನು ತಿದ್ದಿಕೊಳ್ಳಲು ಪ್ರೇರೇಪಣೆ ಪಡೆಯುತ್ತದೆ. ಶಿಕ್ಷಕರು ಇಲ್ಲಿ ಒಂದು ಮಾತನ್ನು

ಮಾನ್ಯಲೇಖಕರು ಹಾಸನ ಜಿಲ್ಲೆಯ ಉದಯಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾಗಿದ್ದಾರೆ.

ನೆನಪಿಟ್ಟುಕೊಳ್ಳಬೇಕು. ಮನೆ ಪಾಠವನ್ನು ಮರೆಯುವುದು, ಪುಸ್ತಕವನ್ನೋ, ಪೆನ್ಸಿಲ್ಲನ್ನೋ ಮನೆಯಲ್ಲಿ ಮರೆತು ಬರುವುದು ಇತ್ಯಾದಿ ಗುಣಗಳು ಕಠಿಣ ಶಿಕ್ಷೆಗೆ ಒಳಪಡುವಂಥವಲ್ಲ. ಮನೆಯ ಮುಕ್ತ ವಾತಾವರಣದಿಂದ, ಆಡುವ ಹುಮ್ಮಸ್ಸಿನಿಂದ, ಕೆಲವು ಸಾಮಾಜಿಕ ಸಂದರ್ಭಗಳಲ್ಲಿ, ಮಗುವು ಮರೆಯುವುದು ಸಹಜ. ಆದರೆ ಇದನ್ನೇ ಅಭ್ಯಾಸವನ್ನಾಗಿ ಮಾಡಿಕೊಳ್ಳದಂತೆ ನೋಡಿಕೊಳ್ಳಬೇಕು. ಮಮತೆ, ಪ್ರೀತಿ, ಸಂಯಮಗಳ ಜೊತೆಗಿರುವ ಶಿಸ್ತು ಎಂತಹ ಮಗುವನ್ನಾದರೂ ತಿದ್ದಬಲ್ಲದು. ಶಿಕ್ಷೆಗಿಂತ ಶಿಸ್ತೇ ಹೆಚ್ಚು ಪರಿಣಾಮಕಾರಿಯೆಂಬುದು ನೆನಪಿರಲಿ. ಎಲ್ಲಕ್ಕೂ ಶಿಕ್ಷಿಸುವುದೊಂದನ್ನೇ ಪರಿಹಾರವೆಂದು ಭಾವಿಸುವ ಶಿಕ್ಷಕ ಎಂದಿಗೂ ಉತ್ತಮ ಶಿಕ್ಷಕನಾಗಲಾರ. ಮಗುವು ಶಿಕ್ಷಕನನ್ನು ಪೋಲಿಸರಿಗೋ, ಸಿಪಾಯಿಗೋ, ಕಥೆಗಳಲ್ಲಿ ಬರುವ ರಾಕ್ಷಸರಿಗೋ ಹೋಲಿಸಿ ಕೊಂಡರೆ, ಶಾಲೆ ಶಾಲೆಯಾಗಿ ಉಳಿಯದೆ ಸೆರೆಮನೆಯಂತೆ ತೋರಿದರೆ ಅದರ ಉಜ್ವಲ ಭವಿಷ್ಯಕ್ಕೆ ಇನ್ನಾವ ದಾರಿ ಇದೆ?

## ಶಿಕ್ಷಣ ಮತ್ತು ಶಿಕ್ಷಕ

ಜೀವನವೆಂಬುದು ನಿರಂತರ ಜ್ಞಾನದಾಹವನ್ನು ತಣಿಸಲು ನಡೆಯುವ ಹೋರಾಟ. ಮನುಷ್ಯ ಹುಟ್ಟಿದ ಗಳಿಗೆಯಿಂದಲೇ ಕಲಿಯುವಿಕೆ ಆರಂಭವಾದರೆ, ಸಾಯುವ ಗಳಿಗೆಯವರೆಗೆ ಒಂದಿಲ್ಲೊಂದು ರೀತಿಯ ಜ್ಞಾನಾರ್ಜನೆ ಆಗುತ್ತಲೇ ಇರುತ್ತದೆ. ಪ್ರಾಚೀನಕಾಲದಲ್ಲಿ ಬಾಳಿ ಬದುಕಿದ ಶ್ರೇಷ್ಠ ಗ್ರೀಕ್ ದಾರ್ಶನಿಕ ಸಾಕ್ರೆಟಿಸ್ ಕೂಡ ಇದಕ್ಕೆ ಹೊರತಲ್ಲ. ಅಥೆನ್ಸ್ ನಗರದ ಆಡಳಿತ ಗಾರರು ಅವನಿಗೆ ಮರಣ ದಂಡನೆ ವಿಧಿಸಿದಾಗ ಅವನು ಸೇವಕರ ಹತ್ತಿರ ಒಂದು ಬಟ್ಟಲು ವಿಷವನ್ನು ತರಲು ತಿಳಿಸಿ, "ನೋಡು, ನಿನಗೆ ಈ ವಿಷದ ಬಗ್ಗೆ ಗೊತ್ತಿರಬಹುದು. ಆದರೆ ನನಗೆ ಗೊತ್ತಿಲ್ಲ. ನನ್ನ ಈ ಕಡೆಯ ಗಳಿಗೆಯಲ್ಲಿ ಈ ವಿಷವನ್ನು ಕುಡಿಯುವುದು ಹೇಗೆ ಹಾಗೂ ಸೇವಿಸಿದ ಬಳಿಕ ಸಾಯುವುದು ಹೇಗೆ ಎಂಬ ಬಗ್ಗೆ ತಿಳಿದುಕೊಳ್ಳುತ್ತೇನೆ" ಎಂದು ಹೇಳಿದನಂತೆ.

ಶಿಕ್ಷಣವೆಂಬುದು ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಬದಲಾವಣೆಯನ್ನು ತಂದೇ ತರುತ್ತದೆ. ಅವನ ಜೀವನ ಕ್ರಮದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಅದು ಮಾರ್ಪಾಡನ್ನು ತರಲೇಬೇಕು, ಅವನ ಕನಸನ್ನು ಸಾಕಾರಗೊಳಿಸಲೇಬೇಕು. ಅದು ಬರಿಯ ಸೈದ್ಧಾಂತಿಕ ಜ್ಞಾನವಿರಬಹುದು, ಕಾರ್ಯಕುಶಲತೆಯಿರಬಹುದು, ಸ್ವಭಾವವಿರಬಹುದು, ಐಶ್ವರ್ಯವಿರಬಹುದು, ಆರೋಗ್ಯವಿರಬಹುದು, ನಡತೆಯಿರಬಹುದು – ಏನೇ ಇರಲಿ, ಇವೆಲ್ಲವೂ ಶಿಕ್ಷಣದಿಂದಲೇ ಬರಬೇಕೆಂಬುದು ಮಾತ್ರ ಸತ್ಯ.

ಶಾಲಾ ಶಿಕ್ಷಣವೆಂಬುದು ಕಲಿಕೆಯ ಒಂದು ಭಾಗವಷ್ಟೆ. ಆದರೂ ಅದು ಪ್ರತಿಯೊಬ್ಬನ ಜೀವನದ ಮೇಲೆಯೂ ಅಗಾಧ ವಾದ ಪರಿಣಾಮವನ್ನು ಬೀರುತ್ತದೆಂಬುದರಲ್ಲಿ ಸಂಶಯವಿಲ್ಲ. ಶಿಕ್ಷಕ ವೃತ್ತಿ ಒಂದು ಶ್ರೇಷ್ಠ ವೃತ್ತಿ. ಇಲ್ಲಿ ಶಿಕ್ಷಕ ಪಡೆಯುವುದಕ್ಕಿಂತ ಕೊಡುವುದೇ ಹೆಚ್ಚು. ಆದರೆ ಈ ಕೊಡುವುದುಂಟಲ್ಲ, ಅದು ಅತ್ಯಂತ ಅಮೂಲ್ಯವಾದುದು, ಬೆಲೆ ಕಟ್ಟಲಾಗದಂತಹುದು. ಶಿಕ್ಷಣವೆಂಬುದು ಕೇವಲ ವಿಷಯಗಳನ್ನು ಮಿದುಳಿನೊಳಗೆ ತುಂಬುವುದಲ್ಲ. ಅದು ನಿಜವಾಗಿಯೂ ಕತ್ತಲ ಕೋಣೆಯಲ್ಲಿ ಒಂದು ದೀಪ ಹಚ್ಚಿದಂತೆ. ಶಿಕ್ಷಣತಜ್ಞರೊಬ್ಬರು ಶಿಕ್ಷಣವೆಂಬುದು ಮಾನವನನ್ನು ರೂಪಿಸುವ ಸಾಧನವೆಂದು ಹೇಳಿದ್ದಾರೆ. ಇಂತಹ ಶಿಕ್ಷಣದಲ್ಲಿ ಎಲ್ಲಾ ಶಿಕ್ಷಕರೂ ವಿದ್ಯಾರ್ಥಿಗಳೆಂಬ ಗಿಡಗಳ ಬೇರಿದ್ದಂತೆ. ಬೇರುಗಳು ಹೇಗೆ ಭೂಮಿಯ ಸತ್ವವನ್ನೆಲ್ಲ ಹೀರಿ ಗಿಡಗಳಿಗೆ ಉಣಬಡಿಸಿ ಅವುಗಳನ್ನು ವಿಶಾಲವಾದ ಮರವಾಗಿ ಬೆಳೆಯಲು ಸಹಾಯ ಮಾಡುತ್ತವೆಯೋ, ಅದೇ ರೀತಿ ಶಿಕ್ಷಕನು ಜ್ಞಾನವೆಂಬ ಅಪೂರ್ವ ಸತ್ವವನ್ನು ಹೀರಿ, ವಿದ್ಯಾರ್ಥಿಗಳಿಗೆ ಉಣಬಡಿಸಿ, ಅವರನ್ನು ಮುಂದೆ ಉತ್ತಮ ನಾಗರಿಕರನ್ನಾಗಿ ಮಾಡುತ್ತಾನೆ. ನಮಗೆ ಬೆಳೆದುನಿಂತ ಮರ ಮಾತ್ರ ಕಣ್ಣಿಗೆ ಕಂಡರೂ, ಅದಕ್ಕೆ ನಿಜವಾದ ಭದ್ರ ಆಧಾರ ಬೇರು ಎಂಬುದನ್ನು ಮಾತ್ರ ಮರೆಯಲಾಗದು. ಇಂದಿನ ಶಿಕ್ಷಣ ಪದ್ಧತಿಯ ಬಗ್ಗೆ ಒಂದು ಟೀಕೆಯ ಮಾತಿದೆ: ಇಂದಿನ ಶಿಕ್ಷಣವೆಂದರೆ ಗುರುಶಿಷ್ಯರಿಬ್ಬರಿಗೂ ಅರ್ಥವಾಗದ ರೀತಿಯಲ್ಲಿ ಶಿಕ್ಷಕರ ಹಳೇ ಟಿಪ್ಪಣಿಪುಸ್ತಕದಿಂದ ವಿಷಯವನ್ನು ವಿದ್ಯಾರ್ಥಿಗಳ ಹೊಸ ಟಿಪ್ಪಣಿ ಪುಸ್ತಕದ ಒಳಗೆ, ಅವರ ಪೆನ್ನಿನ ಮೂಲಕ ವರ್ಗಾಯಿಸುವ ಅದ್ಭುತವಾದ ಕ್ರಿಯೆ! ಇದು ಇಂದಿನ ಶಿಕ್ಷಣದ ದುಸ್ಥಿತಿ.

ಭಾರತವು ಬ್ರಿಟಿಷ್ ಆಳ್ವಿಕೆಯಲ್ಲಿದ್ದಾಗ ಲಾರ್ಡ್ ಕ್ಲೈವ್ ಇಂಗ್ಲೆಂಡಿನ ರಾಣಿಗೆ ಈ ರೀತಿ ಬರೆಯುತ್ತಾನೆ : "ಭಾರತದ ಹಳ್ಳಿಗಳಲ್ಲಿ ಪ್ರತಿಯೊಬ್ಬ ವ್ಯಕ್ತಿ, ಮಹಿಳೆ ಹಾಗೂ ಮಗುವಿಗೂ ಬರೆಯಲು, ಓದಲು ಹಾಗೂ ಅಂಕಗಣಿತವನ್ನು ಮಾಡಲು ಬರುತ್ತದೆ. ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸಾಮಾನ್ಯವಾಗಿ ದೇವಸ್ಥಾನದ ಹತ್ತಿರವಿರುವ ಮರದ ನೆರಳಿನಲ್ಲಿ ಸೇರುತ್ತಾರೆ. ನೆಲದ ಮೇಲೆ ಕುಳಿತುಕೊಳ್ಳುವುದು ಇಲ್ಲಿ ಹಿಂದಿನಿಂದಲೂ ಬಂದ ಪರಂಪರೆ. ಒಂದು ತರಗತಿಯಲ್ಲಿ ಎಲ್ಲ ವಯಸ್ಸಿನವರೂ ಇರುತ್ತಿದ್ದರು. ಕಲೆ, ಕಥೆ ಹೇಳುವುದು, ಕೆಲಸ ಮಾಡುವುದು, ತಂದೆ ತಾಯಿಯರ ಮತ್ತು ಗುರುಗಳ ಸೇವೆ ಮಾಡುವುದು – ಇವೆಲ್ಲ ಕಲಿಕೆಯ ಅಂಗವಾಗಿತ್ತು. ಒಟ್ಟಿನಲ್ಲಿ ಮನೆ, ಶಾಲೆ ಹಾಗೂ ದಿನನಿತ್ಯದ ಜೀವನ – ಇವು ಒಂದಕ್ಕೊಂದು ಪರಸ್ಪರ ಹೊಂದಿಕೊಂಡಿರುತ್ತಿದ್ದವು." ತನ್ನ ದೇಶದ ಶಿಕ್ಷಣಕ್ಕೆ ಹೋಲಿಸಿ ಆಂಗ್ಲನೊಬ್ಬನು ಹೇಳಿದ ಮಾತಿದು. ಅಂದಿನ ಕಾಲದ ಗುರುಕುಲ ಪದ್ಧತಿ ಇಂದು ಎಲ್ಲಿ ಹೋಯಿತು?

ಕೆಟ್ಟ ಶಿಕ್ಷಕ ಪಾಠವನ್ನು ಹೇಳುತ್ತಾನೆ, ಉತ್ತಮ ಶಿಕ್ಷಕ ಪಾಠವನ್ನು ಕಲಿಸುತ್ತಾನೆ; ಅತ್ಯುತ್ತಮ ಶಿಕ್ಷಕ ಪ್ರದರ್ಶಕನಾಗಿ ಪಾಠವನ್ನು ಕಲಿಸುತ್ತಾನೆ; ಆದರೆ ಅಸಾಮಾನ್ಯ ಶಿಕ್ಷಕ ಮಾತ್ರ ವಿದ್ಯಾರ್ಥಿಗಳನ್ನು ಪ್ರೇರೇಪಿಸುತ್ತಾನೆ. ಇಂತಹ ಪ್ರೇರಕ ಶಕ್ತಿಯಾಗಿ, ಮಾರ್ಗದರ್ಶಕರಾಗಿ, ನಿಃಸ್ವಾರ್ಥಿಗಳಾಗಿ, ಆದರ್ಶ ಗುರುಗಳಾಗಿ ಶಿಕ್ಷಕರು ದುಡಿದಾಗ ಮಾತ್ರ ಈ ದೇಶ ಉತ್ತಮ ಪ್ರಜೆಗಳನ್ನು ಪಡೆಯಬಲ್ಲುದು.